ಇ) ಸಾರ್ವಜನಿಕ ಆಸ್ಪತ್ರೆ, ಹರಿಹರದಲ್ಲಿ ಹಾಲಿ ಒಂದು ಆಂಬ್ಯುಲೆನ್ಸ್ ವಾಹನ ಕಾರ್ಯನಿರ್ವಹಿಸುತ್ತಿದೆ.

ಭಟ್ಕಳ ತಾಲ್ಲೂಕಿನಲ್ಲಿ ನೂರು ಮನೆ ಯೋಜನೆ ಅನುಷ್ಠಾನ

3571 (4076) ಶ್ರೀ ನಾಯಕ್ ಜೆ.ಡಿ. (ಭಟ್ಕಳ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಗೃಹಮಂಡಳಿಯ ನೂರು–ಮನೆಗಳ ಯೋಜನೆ ಕೈಗೊಂಡ ಕಾರ್ಯಕ್ರಮ ಯಾವ ಹಂತದಲ್ಲಿ ಇದೆ;

ಆ) ಭಟ್ಕಳ ತಾಲ್ಲೂಕಿನ ಭಟ್ಕಳ ಮತ್ತು ಮುರ್ಡೇಶ್ವರ ಹಾಗೂ ಹೊನ್ನಾವರ ತಾಲ್ಲೂಕಿನ ಮಂಕಿ ಹೊನ್ನಾವರದಲ್ಲಿ ಎಷ್ಟು ಜಮೀನು ಈ ಯೋಜನೆಗಾಗಿ ವಶಪಡಿಸಿಕೊಳ್ಳಲಾಗಿದೆ; ವಿವರ ಒದಗಿಸುವುದು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಭಟ್ಕಳ ತಾಲ್ಲೂಕು ಜಾಲಿ ಮತ್ತು ಮುರ್ಡೇಶ್ವರ ಗ್ರಾಮಗಳಲ್ಲಿ ಜಮೀನನ್ನು ಗುರುತಿಸಲಾಗಿದೆ. ಆಯುಕ್ತರು, ಕರ್ನಾಟಕ ಗೃಹ ಮಂಡಳಿರವರು ಸ್ಥಳ, ತನಿಖೆ ನಡೆಸಿ ಜಮೀನಿನ ಸೂಕ್ತತೆಯ ಬಗ್ಗೆ ಪರಿಶೀಲಿಸಿ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಜಮೀನನ್ನು ಇದುವರೆವಿಗೂ ವಶಪಡಿಸಿ ಕೊಂಡಿರುವುದಿಲ್ಲ ಹೊನ್ನಾವರ ತಾಲ್ಲೂಕಿನಲ್ಲಿ ಜಮೀನನ್ನು ಗುರುತಿಸಬೇಕಾಗಿರುತ್ತದೆ. ಭಟ್ಕಳ ತಾಲ್ಲೂಕಿನ ಜಾಲಿ, ಮುರ್ಡೇಶ್ವರ ಹಾಗೂ ಮಾವಳ್ಳಿ ಗ್ರಾಮಗಳಲ್ಲಿ ಜಮೀನನ್ನು ವಶಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

ಭಟ್ಕಳ ತಾಲ್ಲೂಕಿನಲ್ಲಿರುವ ಪದವಿ ಪೂರ್ವ ಕಾಲೇಜುಗಳು

3572 (4077) ಶ್ರೀ ನಾಯಕ್ ಜೆ.ಡಿ. (ಭಟ್ಕಳ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಯಾವುದೇ ಜೂನಿಯರ್ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕುಂದಾಪುರ ತಾಲ್ಲೂಕಿನ ಕೊಟ್ಟೇಶ್ವರದಿಂದ ಸ್ಥಳಾಂತರ ಮಾಡುವ ಹಂತದಲ್ಲಿರುವ ಜೂನಿಯರ್ ಕಾಲೇಜನ್ನು ಭಟ್ಕಳ ಹಾಗೂ ಕುಂದಾಪುರ ಗಡಿ ಪ್ರದೇಶವಾದ ಬೇಳಕ್ಕಿಗೆ ಸ್ಥಳಾಂತರ ಮಾಡಲು ಸರ್ಕಾರದ ಯೋಜನೆ ಇದೆಯೇ?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಭಟ್ಕಳ ತಾಲ್ಲೂಕು ಕೇಂದ್ರದಲ್ಲಿ 3 ಹಾಗೂ ಭಟ್ಕಳ ಗ್ರಾಮೀಣ ಪ್ರದೇಶದಲ್ಲಿ 3 ಪದವಿ ಪೂರ್ವ ಕಾಲೇಜುಗಳಿವೆ.

ಆ) ಇಲ್ಲ

ಭಟ್ಕಳ ತಾಲ್ಲೂಕಿನಲ್ಲಿ ಜೂನಿಯರ್ ಕಾಲೇಜು ಶಿಕ್ಷಕರ ನೇಮಕಾತಿ

3573 (4078) ಶ್ರೀ ನಾಯಕ್ ಜೆ.ಡಿ. (ಭಟ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?